
ಸಾಕಷ್ಟು ಜನ ಕುಳಿತು ಊಟ ಮಾಡುತ್ತಿರುವುದು ಕಾಣಿಸಿತು. ರೈಲಿನ ಬೋಗಿಯಂತೆ ಉದ್ದಕ್ಕೆ ಹೊಟೇಲ್ ಒಳಗೆ ಹೋದಷ್ಟು ತೆರೆದುಕೊಳ್ಳುತ್ತಿತ್ತು. ಉರ್ಮಿ ಒಳನಡೆದು ಕುಳಿತುಕೊಂಡಳು. ಹೆಚ್ಚಿನ ಗಂಡಸರೇ ಅಲ್ಲಿದ್ದರು. ಹುಡುಗಿಯೊಬ್ಬಳೇ ಬಂದುದನ್ನು ಬಹಳಷ್ಟು ಜನ ನೋಡಿದರೂ ಆಕೆಯಡೆಗೆ ಲಕ್ಷ್ಯಗೊಡದೇ ತಮ್ಮ ಪಾಡಿಗೆ ಉಣ್ಣುತ್ತಿದ್ದರು. ಅಲ್ಲಲ್ಲಿ ಗೋಡೆಯ ಮೇಲೆ ವಿವಿಧ ತಿನಿಸುಗಳ ಹೆಸರು ಮತ್ತು ಅವುಗಳ ದರವನ್ನು ತಪ್ಪು ಇಂಗ್ಲಿಷ್‌ನಲ್ಲಿ ಬರೆದಿದ್ದರು. ಆ ದಿನದ ಸ್ಪೆಷಲ್ ಫಿಶ್ ಫ್ರೈ ಕೂಡಾ ಅಲ್ಲಿ ರಾರಾಜಿಸುತ್ತಿತ್ತು. ಉರ್ಮಿಗೆ ತಾನು ಕಡೆಗೂ ಸರಿಯಾದ ಜಾಗಕ್ಕೆ ಬಂದೆನೆನ್ನುವ ಸಮಾಧಾನವಾಯಿತು. ತನಗೆ ಬೇಕೆನಿಸಿದ್ದನ್ನು ಕೇಳಿ ಮನಸಾರೆ ಸವಿದಳು. ಊಟ ಮುಗಿಸಿ ಇನ್ನೇನು ಹೊರಡಬೇಕೆನ್ನುವಷ್ಟರಲ್ಲಿ ಯಾರ ಕಣ್ಣಿಗೂ ಬೀಳದ ಹಾಗೆ ಅಳುಕಿನಲ್ಲಿ ಗುಂಪೊಂದು ಒಳಬರಲು ಪ್ರಯತ್ನಿಸಿತು. ಗುಂಪಲ್ಲಿದ್ದವರು ಕುಡಿದು ತುಸು ತೂರಾಡುತ್ತಿದ್ದುದರಿಂದ ಅವರ ಗುಟ್ಟಿನ ಪ್ರಯಾಸವೆಲ್ಲಾ ಹಾಸ್ಯ ಪ್ರಹಸನದ ತಾಲೀಮಿನಂತೆ ಅಲ್ಲಿದ್ದವರ ಗಮನ ಸೆಳೆಯಿತು. ಆ ಗುಂಪಲ್ಲಿದ್ದ ವ್ಯಕ್ತಿಯೊಬ್ಬನನ್ನು ಸರಿಯಾಗಿ ಪರೀಕ್ಷಿಸಿದ ಉರ್ಮಿಗೆ ಕಣ್ಣಾರೆ ಕಂಡದ್ದನ್ನು ನಂಬುವುದು ಕಷ್ಟವಾಗಿತ್ತು. ತನ್ನಷ್ಟಕ್ಕೆ ತಾನೇ ಮುಗುಳ್ನಕ್ಕು ಅಲ್ಲಿಯೇ ಕುಳಿತುಕೊಂಡಳು. ಆ ಗುಂಪು ಚುರುಕಾಗಿ ಹೊಟೇಲ್ ಹಿಂಭಾಗದ ಅಡುಗೆ ಕೋಣೆಯ ಸಂಧಿಯಲ್ಲಿ ಒಳನಡೆದು ಮಾಯವಾಯಿತು.

ಅಪರೂಪಕ್ಕೆ ಊರಿಗೆ ಬಂದರೂ ಯಾವಾಗಲೂ ಮೂರು ದಿನಕ್ಕಿಂತಾ ಹೆಚ್ಚು ಮನೆಯಲ್ಲಿರದ ಪುಟ್ಟನ ಸ್ವಭಾವಕ್ಕೆ ಅಮ್ಮ ಮರುಗುತ್ತಾ ಅಕ್ಕಿ, ಬೆಲ್ಲ, ತೆಂಗಿಕಾಯಿ, ಕಾಳುಮೆಣಸು ಹೀಗೆ ಮನೆ ಬಳಕೆಗೆ ಬೇಕಾದ ವಸ್ತುಗಳನ್ನು ಚೀಲಕ್ಕೆ ತುಂಬಿಸುತ್ತಿದ್ದರು. ಪುಟ್ಟನ ದೊಡ್ಡಣ್ಣನೂ ಅಮ್ಮನಿಗೆ ಸಹಾಯ ಮಾಡುತ್ತಿದ್ದ. ಉರ್ಮಿಗೆ ಆ ಊರಿನಿಂದ ಹೊರಡುವ ಮನಸ್ಸಿರಲಿಲ್ಲ. ನಿಧಾನಕ್ಕೆ ಊರು ಹೊಸತಾಗಿ ತೆರೆಯುತ್ತಿರುವಂತೆ ಅನ್ನಿಸುತ್ತಿತ್ತು. ಮತ್ತೊಮ್ಮೆ ಗುಡ್ಡ, ಬೆಟ್ಟ, ಕಾನು ಸುತ್ತಿ ಕಾಡುಕೋಣಗಳ ಫೋಟೊ ತೆಗೆಯಬೇಕೆಂದು ಮನಸ್ಸು ಹಾತೊರೆಯುತ್ತಿತ್ತು. ಮರಳಿ ಹೊರಡುವ ಬಸ್ಸು ರಾತ್ರಿಯಿದ್ದುದರಿಂದ ಅವತ್ತು ಇಡೀ ದಿನ ಉರ್ಮಿಯೊಬ್ಬಳೇ ತಿರುಗಾಟ



ನಡೆಸಿದ್ದಳು. ಯಾರ ಯಾರದೋ ಮನೆ, ಅಡಿಕೆ ತೋಟ, ಭತ್ತದ ಗದ್ದೆ, ಬೇಣ, ತೊರೆ ಹೀಗೆ ನಾನಾಕಡೆ ಓಡಾಡಿ ಕೊನೆಗೆ ಮನೆಯ ಹಿಂದಿನ ಗುಡ್ಡದ ಕಣಕ್ಕೆ ಬಂದಳು. ಅಲ್ಲಿದ್ದ ಸೂರಣ್ಣನನ್ನು ನೋಡಿ ಮುಗುಳ್ನಕ್ಕ ಉರ್ಮಿ, ಅಂಕಲ್ ಎಂದು ಕರೆದು ಇಂಗ್ಲಿಷ್‌ನಲ್ಲಿ ಉದ್ದಕ್ಕೆ ಏನೋ ಹೇಳಿದಳು. ಹೆಚ್ಚಿನದು ಆತನಿಗೆ ಅರ್ಥವಾಗದಿದ್ದರೂ ಉರ್ಮಿಯ ಮಾತಿನ ನಡುವೆ ಪದೇ ಪದೇ ಒಂದರಮೇಲೊಂದರಂತೆ ಬಂದೆರಗಿದ ಅನಿರೀಕ್ಷಿತ ಶಬ್ದಗಳ ಇರಿತದ ಅರಿವಾಯಿತು. ಡ್ರಿಂಕ್ಸ್, ಹಮೀದನ ಹೋಟೆಲ್ಲು, ಫಿಶ್ ಫ್ರೈ ಮತ್ತು ಕಡೆಯಲ್ಲಿ ವೆಜ್ ಕಾಫಿ ಪದಗಳು ಆತನನ್ನು ಉದ್ವೇಗ ಮತ್ತು ದಿಗ್ಭ್ರಮೆಯಲ್ಲಿ ಪೇಚಾಡಿಸಿದವು. ಆಕೆಯ ಕಣ್ಣಲ್ಲಿದ್ದ ತೀಕ್ಷ್ಣತೆ ಅವನಿಗೆ ಹೆದರಿಕೆ ತರಿಸಿತು. ಒಂದುಕ್ಷಣ ಸಾವರಿಸಿಕೊಂಡು ಆತ ಏನೋ ಹೇಳಲು ಹವಣಿಸಿದ. ಭಾವಕ್ಕೆ ಭಾಷೆ ನಿಲುಕಲಿಲ್ಲ. ಎಲೆಯಡಿಕೆ ಕವಳದ ಕೆಂಪು ಬಾಯಿಯೊಳಗೆ ಅರ್ಧ ಮುರಿದು ಕಪ್ಪಾದ ಹಲ್ಲನ್ನು ತೋರಿಸುತ್ತಾ ಸೂರಣ್ಣ ಹ್ಹಿ ಹ್ಹಿ ಎಂದು ನಕ್ಕ. ಅವನ ಮಾತಿಗಾಗಿ ಕಾದಳು ಉರ್ಮಿ. ●